# ಕೊರಿಯ 'ಕಲಾತ್ಮಕ ಕೈಲಿಪಿ' ಪ್ರದರ್ಶನದಲ್ಲಿ ಕಗ್ಗದ ಸಾಲು

# ಕನ್ನಡಕ್ಕೆ ಮಾನ



ಇ.ವಿ. ಶಿವರಾಂ



ತನ್ನ ಕಲಾತ್ಮಕ ಕೈಲಿಪಿಯ ಮಾದರಿಯೊಂದಿಗೆ ಓರ್ವ ಕಲಾವಿದೆ. ಅವರ ಹಿಂಬದಿಯಲ್ಲಿ ಎಸ್ಸಾರ್ ಅವರ ಕಗ್ಗದ ಗುಚ್ಛದ ಮಾದರಿ ಪ್ರದರ್ಶನ

ದಕ್ಷಿಣ ಕೊರಿಯಾದಲ್ಲಿನ 'ಕಲಾತ್ಮಕ ಕೈಲಿಪಿ' ಅಂತರರಾಷ್ಟ್ರೀಯ ಪ್ರದರ್ಶನದಲ್ಲಿ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ದ ಒಂದು ಗುಚ್ಛವನ್ನು ಬಳಸಿಕೊಂಡು ಇ.ವಿ. ಶಿವರಾಂ ರೂಪಿಸಿದ 'ಕೈಲಿಪಿ ಮಾದರಿ' ಸ್ಥಾನ ಪಡೆದಿದೆ. ಈ ಪ್ರದರ್ಶನದಲ್ಲಿ ಕನ್ನಡಕ್ಕೆ ಅವಕಾಶ ದೊರೆತಿರುವುದು ಇದೇ ಮೊದಲು.

■ **ನಾ. ಕಾರಂತ ಪೆರಾಜೆ**

ಇದು ಕನ್ನಾಡು ಹೆಮ್ಮೆಪಡುವ ಸುದ್ದಿ!

ಕನ್ನಡಿಗ ಕಲಾವಿದರೊಬ್ಬರ ಕಲಾತ್ಮಕ ಕೈಲಿಪಿಯು ದಕ್ಷಿಣ ಕೊರಿಯಾದ ಪ್ರದರ್ಶನವೊಂದಲ್ಲಿ ಸ್ಥಾನ ಪಡೆದಿದೆ. ಪ್ರಶಂಸೆಗೆ ಪಾತ್ರವಾಗಿದೆ. ಆ ಪ್ರದರ್ಶನದಲ್ಲಿ ಪ್ರದರ್ಶಿತವಾದ ಮೊಟ್ಟಮೊದಲ ಕನ್ನಡ ಕಲಾತ್ಮಕ ಕೈಲಿಪಿ ಮಾದರಿಯೆಂಬ ನೆಗಳ್ತೆ ಪಡೆದಿದೆ. ನಿಜಾರ್ಥದಲ್ಲಿ ಕಡಲಾಚೆಯಲ್ಲಿ ಕನ್ನಡಕ್ಕೆ ಸಂದ ಮಾನ.

ಏನಿದು ಕಲಾತ್ಮಕ ಕೈಲಿಪಿ? ಬಾಲ್ಯವನ್ನೊಮ್ಮೆ ಜ್ಞಾಪಿಸಿಕೊಳ್ಳೋಣ. ಪ್ರಾಥಮಿಕ ಶಾಲೆಯ ಅಧ್ಯಾಪಕರು ಅಕ್ಷರ ಅಂದವಾಗಲು ಮತ್ತು ಸ್ಫುಟವಾಗಲು 'ಕಾಪಿ ಬರೆಸುವ' ಕ್ರಮ ಕಡ್ಡಾಯವಾಗಿತ್ತು. ಹೀಗೆ ಪಕ್ವಗೊಂಡ ಅಕ್ಷರಗಳು 'ಕೈಲಿಪಿ'ಯಾಗಿ ಮುಂದೆ ಅವರವರ ಅಸಕ್ತಿಯಂತೆ ವೈವಿಧ್ಯ ವಿನ್ಯಾಸಗಳಿಂದ ರೂಪುಗೊಳ್ಳುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಚಿತ್ರ ಕಲಾವಿದ, ವ್ಯಂಗ್ಯಚಿತ್ರಕಾರ ಇ.ವಿ. ಶಿವರಾಂ ಅವರ ಕಾವ್ಯನಾಮ ಎಸ್ಸಾರ್ ಪುತ್ತೂರು. ಅವರ ಹಸ್ತಾಕ್ಷರವನ್ನೊಮ್ಮೆ ನೋಡಿ. ಅದು ಕೈಯಲ್ಲೇ ಬರೆದುದೋ ಮುದ್ರಿತ ಅಕ್ಷರಗಳೋ ಎಂದು ಮೊದಲ ನೋಟದಲ್ಲೇ ಕಂಡು ಹಿಡಿಯಲು